ವಿಶ್ವವಾಣಿ

ಸಂಪಾದಕೀಯ

ಕಲಾ ಕುಟುಂಬಕ್ಕೆ ಸಲ್ಲಿಸಿದ ಗೌರವ

ಮಾದಕ ವ್ಯಸನದ ಆರೋಪದಿಂದ ಸ್ಯಾಂಡಲ್‌ವುಡ್ ವಿವಾದಕ್ಕೆ ಸಿಲುರುವ ಸಂದರ್ಭದಲ್ಲಿ ಚಿತ್ರರಂಗದ ಬಹಳಷ್ಟು ಮಹತ್ವದ ಬೆಳವಣಿಗೆಗಳು ಕಡೆಗಣನೆಯಾಗುತ್ತಿವೆ. ಇದಕ್ಕೆ ಡಾ. ವಿಷ್ಣುವರ್ಧನ್ ಸ್ಮಾರಕದ ಭೂಮಿಪೂಜೆಯೇ ಉದಾಹರಣೆ. ದಶಕಗಳಿಂದ ಭರವಸೆಯಾಗಿಯೇ ಉಳಿದಿದ್ದ ಡಾ.ವಿಷ್ಣು ಸ್ಮಾರಕದ ಭೂಮಿಪೂಜೆ ನೆರವೇರಿದೆ. ಆದರೆ ಇದೀಗ ಚಿತ್ರರಂಗದ ಇಂಥ ಮಹತ್ವದ ಘಟನೆಯನ್ನು ಮರೆಯಾಗುವಂತೆ ಮಾಡಿದೆ ಡ್ರಗ್ಸ್ ಪ್ರಕರಣ.

2009ರ ಡಿಸೆಂಬರ್ 30ರಂದು ಸಂಭವಿಸಿದ ಡಾ.ವಿಷ್ಣುವರ್ಧನ್ ಅವರ ನಿಧನ ಕನ್ನಡಚಿತ್ರರಂಗಕ್ಕೆ ದೊಡ್ಡ ಆಘಾತವನ್ನು ನೀಡಿತ್ತು. ನಂತರ ಅವರ ಕುಟುಂಬಸ್ಥರು ಹಾಗೂ ಅಭಿಮಾನಿಗಳು ಸ್ಮಾರಕವನ್ನು ಮೈಸೂರಿನಲ್ಲಿ ಸ್ಥಾಪಿಸಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ದಶಕ ಕಳೆದರೂ ಇದುವರೆಗೆ ಕೇವಲ ಭರವಸೆಯಾಗಿಯೇ ಉಳಿದಿದ್ದ ಸ್ಮಾರಕ ಭವನ ನಿರ್ಮಾಣಕ್ಕೆ ಸೆ.15ರ ಮಂಗಳವಾರದಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಗೃಹ ಕಚೇರಿ ಕೃಷ್ಣಾದಲ್ಲಿ ಆನ್‌ಲೈನ್ ಮೂಲಕ ಭೂಮಿ ಪೂಜೆ ನೆರವೇರಿಸಿದ್ದಾರೆ. ಇದು ಡಾ.ವಿಷ್ಣುವರ್ಧನ್‌ನಂಥ ಪ್ರತಿಭೆ ಹಾಗೂ ಅವರ ಕಲಾ ಕುಟುಂಬಕ್ಕೆ ಸರಕಾರ ಸಲ್ಲಿಸುವ ಒಂದು ಗೌರವ. ಸೆ.18ರಂದು ನಡೆಯಲಿರುವ ಡಾ.ವಿಷ್ಣುವರ್ಧನ್ ಅವರ 70ನೇ ವರ್ಷದ ಹುಟ್ಟುಹಬ್ಬಕ್ಕೆ ಸಲ್ಲಿಸಿದ ಕೊಡುಗೆ.

ಡಾ. ರಾಜ್‌ಕುಮಾರ್ ಅವರ ನಂತರದ ಪೀಳಿಗೆಯ ಮಹತ್ವ ನಟ ಡಾ. ವಿಷ್ಣುವರ್ಧನ್. ಸತತವಾಗಿ 38 ವರ್ಷಗಳ ಕಾಲ, ಸದಭಿರುಚಿಯ ಚಿತ್ರಗಳನ್ನು ನೀಡಿ ಅಭಿಮಾನಿಗಳ ಮನಸಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿದ್ದಾರೆ. ಇಂಥ ಕಲಾವಿದನಿಗೆ ಸ್ಮಾರಕ ನಿರ್ಮಾಣದ ಮೂಲಕ ಗೌರವ ಸಲ್ಲಿಸುತ್ತಿರುವ ಈ ವೇಳೆಯಲ್ಲಿ ಚಿತ್ರರಂಗ ಸಂಭ್ರಮಕ್ಕಿಂತಲೂ ಸಂದಿಗ್ಧ ಸ್ಥಿತಿಗೆ ಸಿಲುಕಿಕೊಂಡಿದೆ. ಆದರೂ ವಿಷ್ಣುವರ್ಧನ್ ಅಭಿಮಾನಿಗಳ ಪಾಲಿಗೆ ಇದೊಂದು ಮಹತ್ವದ ಬೆಳವಣಿಗೆಯಾಗಿದ್ದು, ಸರಕಾರದ ಪಾತ್ರವೂ ಶ್ಲಾಘನೀಯ.

ಸೊಂಪಾದಕೀಯ

ಅರ್ಥ ಅಪಾರ್ಥ

ಈ ರಾಜಕಾರಣಿಗಳಿಗಿಂತ ಊಸರವಳ್ಳಿಗಳೇ ಮೇಲು ಅನಿಸುತ್ತೆ. ಯಾಕಂದ್ರೆ, ಇವರದು ಒಂಥರಾ ದೇಶಾವರಿ ವರ್ತನೆ. ಏನೋ ಮಾತನಾಡಿಬಿಡ್ತಾರೆ. ಆಮೇಲೆ ಹಾಗೆ ಹೇಳಿಲ್ಲ ಅಂದು ಬಿಡ್ತಾರೆ. ಮೊದಲಾದರೆ ನನ್ನ ಮಾತನ್ನು ತಿರುಚಿ ಬರೆಯಲಾಗಿದೆ ಎಂದು ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದರು. ಆದರೆ ಈ ಟಿವಿ ಮಾಧ್ಯಮಗಳು ಬಂದಮೇಲೆ ಹಾಗೆ ಹೇಳಿ ನುಣುಚಿಕೊಳ್ಳುವುದೂ ಕಷ್ಟವಾಗಿದೆ. ತಿರುಚ್ಚಿಯೂ ಇಲ್ಲ, ಪುರುಚ್ಚಿಯೂ ಇಲ್ಲ. ಎಲ್ಲಾ ಬ್ಲ್ಯಾಕ್ ಅಂಡ್ ವೈಟ್, ಅಲ್ಲಲ್ಲ ಕಲರ್‌ನಲ್ಲಿ ಕಾಣಿಸುತ್ತೆ ಹಾಗೂ ಕೇಳುತ್ತೆ. ಆದರೂ ಅವರು ಸುಲಭಕ್ಕೆ ಸೋಲುವವರು, ಮಣಿಯುವವರು ಅಲ್ಲ. ಕೂದಲಲ್ಲಿ ಬೆಣ್ಣೆ ತೆಗೆಯುವ ಕಲೆ ಅವರಿಗೆ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಈಗ 'ನನ್ನ ಮಾತಿನ ಅರ್ಥ ಅದಾಗಿರಲಿಲ್ಲ' ಅಂತ ರೂಟ್ ಚೇಂಜ್ ಮಾಡುತ್ತಿದ್ದಾರೆ. ಕೆಲವು ಸ್ಯಾಂಪಲ್‌ಗಳನ್ನು ನೋಡಿ. ಸಚಿವ ಜಗದೀಶ್ ಶೆಟ್ಟರ್ ಅವರು ದೆಹಲಿಗೆ ಹೋಗಿದ್ದರು. ಅಲ್ಲಿ ಯಾರ್‍ಯಾರನ್ನೋ ಭೇಟಿ ಮಾಡಿದರು, ಹಾಗೆ ಹೀಗೆ ಎಂಬ ವರದಿಗಳು ಪ್ರಕಟವಾದವು. ಅದಕ್ಕೆ ರಿಯಾಕ್ಟ್ ಮಾಡಲೇಬೇಕಲ್ವಾ. ಮೊದಲಾದರೆ ದೆಹಲಿಗೇ ಹೋಗಿರಲಿಲ್ಲ ಅಂತಿದ್ರೋ ಏನೋ. ಆದರೀಗ 'ಬುಕ್ ಕೊಡಲು ಹೋಗಿದ್ದೆ, ನೀತಿ ಆಯೋಗದ ಪ್ರಮುಖರನ್ನು ಭೇಟಿ ಮಾಡಲು ಬಂದಿದ್ದೆ' ಎಂದಿದ್ದಾರೆ. ನನ್ನ ದೆಹಲಿ ಭೇಟಿಗೆ ಅಪಾರ್ಥ ಕಲ್ಪಿಸಬಾರದು ಎಂದಿದ್ದಾರೆ. ಅದು ಸರಿ. ಈ ಮಾಧ್ಯಮಗಳವರೂ ಬಲು ಕಿಲಾಡಿ. ಬುಕ್ ಕೊಡಲು ಅನ್ನೋದನ್ನ ಬುಕ್ ಮಾಡಲು ಅಂತೇನಾದರೂ ಬರೆದುಬಿಟ್ರೆ ಮುಗೀತು. ಮತ್ತೆ ಅಪಾರ್ಥ. ಅಪಾರ್ಥಕ್ಕೆ ಅಪಾರ ಅರ್ಥ ಅಂತನೂ ಒಂದು ಅರ್ಥ ಇದೆ ಸ್ವಾಮಿ. ಅತ್ಲಾಕಡೆ ನಮ್ಮ ಅಶೋಕ್ ಅವರದೂ ಇದೇ ಕಥೆ. ಯಡಿಯೂರಪ್ಪ ಅವರಿಗೆ ಸ್ಪಿನ್, ವೈಡ್, ಸ್ಪೀಡ್ ಯಾವ ರೀತಿ ಬಾಲ್ ಹಾಕಿದರೂ ಸಿಕ್ಸ್ ಹೊಡೀತಾರೆ ಎಂದು ಹೇಳಿದ್ದಾರೆ. ಹಾಗಾದರೆ ಇವರು ಸಿಕ್ಸರ್ ಸಿದ್ದು ಆದರು ಬಿಡಿ. ಆದರೆ ಹಾಗೆ ಹೇಳಿದರೂ ಅಪಾರ್ಥ ಆಗುತ್ತೆ. ಯಾಕೆಂದರೆ ಸಿದ್ದು ಅವರು ವಿರೋಧ ಪಕ್ಷದ ನಾಯಕರು ತಾನೆ. ಅಯ್ಯೋ ಎಲ್ಲಾ ಕನ್‌ಫ್ಯೂಷನ್ನು. ನಮ್ಮ ಸ್ವಾಮಣ್ಣ ಅವರೂ ಹೀಗೇ ಒಂದೆರಡು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದೇನೋ ರಾಕ್ಷಸ ಅನ್ನೋ ಪದ ಬಳಸಿ ಒದ್ದಾಡಿಬಿಟ್ಟರು. ಹಾಗಲ್ಲ ಹೇಳಿದ್ದು, ಅವರಿಗಲ್ಲ ಹೇಳಿದ್ದು ಅಂತೆಲ್ಲ ಅವರು ಕೊಟ್ಟ ವಿವರಣೆ ಕೇಳಿ ಎಲ್ಲರೂ ರಕ್ಕಸ ಬೆರಗಾದರು ಅನ್ನಿ. ಇದೀಗ ಮತ್ತೆ, ಒಂದು ಲಕ್ಷ ಮನೆ ಕಟ್ಟಿಸ್ತೀನಿ ಅನ್ನೋ ಮಾತಿನ ಕಡೆ ಎಲ್ಲರ ಲಕ್ಷ್ಯ ಹೋಗಿದೆ. ಲಕ್ಷ ಮನೆ ಅಂದರೆ ಅವೇನು ರಟ್ಟಿನ ಮನೆಯಾ, ಅಥವಾ ಗುಬ್ಬಿಮನೆ ಅಂತ ಉಸುಕಿನಲ್ಲಿ ಕಟ್ಟುತ್ತಿದ್ವಲ್ಲಾ ಅವಾ ಅಂತೆಲ್ಲ ಜನ ಕೇಳತೊಡಗಿದ್ದರೆ. ಇದಕ್ಕೂ ಮತ್ತೆ ನಾನು ಆ ಅರ್ಥದಲ್ಲಿ ಹೇಳಿಲ್ಲ ಅನ್ನಬಹುದು.

ಒಟ್ಟಿನಲ್ಲಿ ಇವರೆಲ್ಲ ಯಾವ ಅರ್ಥದಲ್ಲಿ ಏನು ಹೇಳುತ್ತಾರೋ, ಬೇರೆಯವರು ಯಾವ ರೀತಿ ಅರ್ಥ ಮಾಡ್ಕೋತಾರೋ ಅಥವಾ ಅಪಾರ್ಥ ಮಾಡ್ಕೊತಾರೋ ಒಂದೂ ಗೊತ್ತಾಗುತ್ತಿಲ್ಲ.

ಸಂಪಾದಕರ ಸದ್ಯಶೋಧನೆ

ಪತ್ರಕರ್ತೆಯರೂ, ಸುದ್ದಿಮನೆಯೂ !

ಜಗತ್ತಿನಲ್ಲಿ ಅತಿ ಹೆಚ್ಚು ಪ್ರಸಾರ ಹೊಂದಿರುವ ಪತ್ರಿಕೆಗಳ ಪೈಕಿ, ಹದಿನಾಲ್ಕನೇ ಸ್ಥಾನದಲ್ಲಿರುವ, ಕೇರಳದ ಜನಪ್ರಿಯ ದೈನಿಕ 'ಮಲಯಾಳ ಮನೋರಮಾ' ಆರಂಭವಾಗಿ ಒಂದು ನೂರಾ ಮೂವತ್ತು ವರ್ಷಗಳಾದವು. ಆ ಪತ್ರಿಕೆಗೆ ಒಂದು ನೂರಾ ಮೂರು ವರ್ಷಗಳಾಗುವ ತನಕ, ಒಬ್ಬೇ ಒಬ್ಬ ಮಹಿಳೆಯೂ ಆ ಸುದ್ದಿಮನೆಯಲ್ಲಿ ಇರಲಿಲ್ಲ. 1993ರಲ್ಲಿ ಮೊದಲ ಬಾರಿಗೆ, 'ಮನೋರಮಾ' (ಕೆ.ಆರ್.ಮೀರಾ ಎಂಬುವವರು) ಮಹಿಳೆಯರನ್ನು ಸೇರಿಸಿಕೊಂಡಿದ್ದು. ಅದೇ ಪತ್ರಿಕಾ ಸಂಸ್ಥೆ ಸುಮಾರು 45 ವರ್ಷಗಳ ಹಿಂದೆ, ಅಂದರೆ 1975 ರಲ್ಲಿ ಮಹಿಳೆಯರಿಗೆ ಮೀಸಲಾದ 'ವನಿತಾ' ಎಂಬ ನಿಯತಕಾಲಿಕ (ಹದಿನೈದು ದಿನಗಳಿಗೊಮ್ಮೆ) ವನ್ನು ಆರಂಭಿಸಿತು. ಅದನ್ನು ಆರಂಭಿಸಿದವರು ಪತ್ರಿಕೆಯ ಮಾಲೀಕರಾದ ಕೆ.ಎಂ.ಮ್ಯಾಥ್ಯೂ ಅವರ ಪತ್ನಿ ಅಣ್ಣಮ್ಮ ಮ್ಯಾಥ್ಯೂ. 'ವನಿತಾ' ಮಹಿಳೆಯರಿಗೆ ಸಂಬಂಧಿಸಿದ ಪತ್ರಿಕೆಯಾದರೂ, ಅದಕ್ಕೆ ಇಪ್ಪತ್ತು ವರ್ಷ ತುಂಬುವ ತನಕ, ಮಹಿಳೆಯರು ಅದರ ಸುದ್ದಿಮನೆಯಲ್ಲಿ ಇರಲಿಲ್ಲ. 1970ರವರೆಗೆ, ನಮ್ಮ ದೇಶದ ಪತ್ರಿಕೆಗಳಲ್ಲಿ ಬೆರಳೆಣಿಕೆಯಷ್ಟು ಪತ್ರಕರ್ತೆಯರಿದ್ದರು. ಪತ್ರಿಕೋದ್ಯಮ ಮಹಿಳೆಯರಿಗೆ ಹೇಳಿ ಮಾಡಿಸಿದ ಕ್ಷೇತ್ರವಲ್ಲ ಎಂಬ ಭಾವನೆಯಿತ್ತು. ಹಾಗೆಂದು ಭಾರತದ ಪ್ರಪ್ರಥಮ ಮಹಿಳಾ ಫೋಟೋಗ್ರಾಫರ್ ಹೋಮೈ ವ್ಯಾರವಲ್ಲಾ 1930ರಲ್ಲೇ 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ' ನಿಯತಕಾಲಿಕವನ್ನು ಸೇರಿದ್ದಳು. ಮಹಿಳೆಯರು ಆ ದಿನಗಳಲ್ಲಿ ಫೋಟೋಗ್ರಾಫರ್ ಆಗಿದ್ದು ಅಚ್ಚರಿಗಳಲ್ಲೊಂದಾಗಿತ್ತು. ಆಗ ಕೆಮರಾ ಹಿಡಿದ ಮಹಿಳೆಯರನ್ನು ವಿಚಿತ್ರವಾಗಿ ನೋಡುತ್ತಿದ್ದರು. ಒಮ್ಮೆ ಪ್ರಧಾನಿ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಾದಾಗ, ಹೋಮೈ ವ್ಯಾರವಲ್ಲಾ ಹೋಗಿದ್ದಳು. ಅವಳನ್ನು ನೋಡಿ ನೆಹರು, 'ಇಲ್ಲಿ ಸೇರಿರುವವರೆಲ್ಲ ನನಗಿಂತ ನಿಮ್ಮನ್ನೇ ನೋಡುತ್ತಿದ್ದಾರಲ್ಲ?' ಎಂದು ತಮಾಷೆ ಮಾಡಿದ್ದರು. ಸುದ್ದಿಮನೆ ಯಲ್ಲಿರುವ ಮಹಿಳೆಯರನ್ನೂ ಹೀಗೆ ಎಲ್ಲರೂ ದುರುಗುಟ್ಟಿ ನೋಡುತ್ತಿದ್ದರು. ಮಹಿಳೆಯರು ಈ ವೃತ್ತಿ ಸೇರಿದರೆ, ಹೊರಗೆ ತಿರುಗಾಡಬೇಕಾಗುತ್ತದೆ, ಊರೂರು ಸುತ್ತಬೇಕಾಗುತ್ತದೆ, ಆಫೀಸಿನಲ್ಲಿ ಡೆಸ್ಕ್‌ನಲ್ಲಿ ಡ್ಯೂಟಿ ಮಾಡುವಂತಾದರೆ, ರಾತ್ರಿ ಪಾಳಿಯಲ್ಲಿ (ರಾತ್ರಿ ಎಂಟರಿಂದ ಮಧ್ಯರಾತ್ರಿ ಎರಡರವರೆಗೆ) ಕೆಲಸ ಮಾಡಬೇಕಾಗುತ್ತದೆ ಎಂಬ ಕಾರಣಕ್ಕೆ ಮಹಿಳೆಯರು ಈ ವೃತ್ತಿಗೆ ಬರುತ್ತಿರಲಿಲ್ಲ. ಮಹಿಳೆಯರನ್ನು ಸೇರಿಸಿಕೊಂಡರೆ, ಹೆಚ್ಚುವರಿ ಮುತುವರ್ಜಿವಹಿಸಬೇಕಾಗುತ್ತದೆ, ಅವರಿಂದ ಎಲ್ಲಾ ಕೆಲಸಗಳನ್ನು ಮಾಡಿಸಿಕೊಳ್ಳಲು ಆಗುವುದಿಲ್ಲ, ಕೆಲಸಕ್ಕೆ ಸೇರಿಕೊಳ್ಳುವಾಗ ರಾತ್ರಿಪಾಳಿಯಲ್ಲಿ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ, ಮದುವೆಯಾದ ನಂತರ ಆಗುವುದಿಲ್ಲ ಎಂದು ನೆಪ ಹೇಳುತ್ತಾರೆ ಎಂದು ಮಾಲೀಕರು ಸೇರಿಸಿಕೊಳ್ಳುತ್ತಿರಲಿಲ್ಲ. 'ಇಂಡಿಯನ್ ಎಕ್ಸ್‌ಪ್ರೆಸ್' ಮಾಲೀಕರಾದ ರಾಮನಾಥ ಗೋಯೆಂಕಾ ಅವರಂತೂ, ತಮ್ಮ ಯಾವ ಆವೃತ್ತಿಗಳಲ್ಲೂ ಮಹಿಳೆಯರನ್ನು ಸೇರಿಸಿಕೊಳ್ಳಲೇಕೂಡದು ಎಂದು ಅಧಿಸೂಚನೆ ಹೊರಡಿಸಿದ್ದರು. ಅವರ ಈ ನಿರ್ಧಾರದ ಹಿಂದೆ ಮತ್ತೊಂದು ಕಾರಣವಿತ್ತು. ಅದೇನೆಂದರೆ, ಮಹಿಳೆರನ್ನು ಸೇರಿಸಿಕೊಂಡರೆ, ಅವರಿಗೆ ಪ್ರತ್ಯೇಕ ಟಾಯ್ಲೆಟ್ ನಿರ್ಮಿಸಿಕೊಡಬೇಕಾಗುತ್ತದೆಂದು. ಕೆಲವರಿಗಾಗಿ ಈ ವ್ಯವಸ್ಥೆ ಮಾರ್ಪಾಟು ಮಾಡಲು ಖರ್ಚಾಗುತ್ತದೆಂದು ಅವರು ಮಹಿಳೆಯರನ್ನು ಸೇರಿಸಿಕೊಳ್ಳುತ್ತಲೇ ಇರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ. ಎಲ್ಲಾ ಪತ್ರಿಕೆ, ಟಿವಿಗಳಲ್ಲಿ ಪತ್ರಕರ್ತೆಯರೇ ತುಂಬಿದ್ದಾರೆ. ಅವರೇ ಹೆಚ್ಚಿರುವ ಸುದ್ದಿಮನೆಗಳೂ ಇವೆ. ವೃತ್ತಿ ನೈಪುಣ್ಯ ಮೆರೆಯುವುದರಲ್ಲಿ ಅವರು ಪತ್ರಕರ್ತರನ್ನೂ ಮೀರಿಸುತ್ತಿದ್ದಾರೆ. ಸಂಪಾದಕರೂ ಆಗಿದ್ದಾರೆ.

ಕನ್ನಡ ವಿಮರ್ಶಕರು ಕಣ್ಣೆತ್ತಿ ನೋಡಲು ಅವರು ಇನ್ನೆಷ್ಟು ಬರೆಯಬೇಕು?

ಬೇಟೆ

ಜಯವೀರ ವಿಕ್ರಮ್ ಸಂಪತ್ ಗೌಡ

ಅಂಕಣಕಾರರು

ಮೊನ್ನೆ 'ವಿಶ್ವವಾಣಿ' ಕಚೇರಿಗೆ ಹೋದಾಗ, ಸಂಪಾದಕರ ಟೇಬಲ್ಲಿನ ಮೇಲೆ ಸುಧಾಮೂರ್ತಿಯವರು ಬರೆದ ಸುಮಾರು ಹತ್ತಾರು ಪುಸ್ತಕಗಳಿದ್ದವು. ಆಗ ತಾನೇ ಅವರು ಸಪ್ನಾ ಪುಸ್ತಕ ಮಳಿಗೆಗಳಿಂದ ಸುಮಾರು ಐವತ್ತು-ಅರವತ್ತು ಪುಸ್ತಕಗಳನ್ನು ಕೊಂಡು ತಂದಿದ್ದರು. ಸಂಪಾದಕರ ಜತೆ ಅವರ ಸ್ನೇಹಿತರಾದ ನಂಜನಗೂಡು ಮೋಹನ್ ಸಹ ಇದ್ದರು. ಇಬ್ಬರೂ ಪುಸ್ತಕ, ಪತ್ರಕರ್ತರು, ಪತ್ರಿಕೆಗಳ ಬಗ್ಗೆ ಮಾತಾಡುತ್ತಿದ್ದರು. ಇಬ್ಬರು ಪತ್ರಕರ್ತರು ಸೇರಿದರೆ ಇನ್ನೇನು ಮಾತಾಡುತ್ತಾರೆ? ಸಂಪಾದಕರು ಮತ್ತು ಮೋಹನ್ ಮಾತಾಡುತ್ತಿದ್ದರೆ, ನಾನು ಜಟ್ಟಗ. ಸುಮ್ಮನೆ ಕೇಳುತ್ತಿರುತ್ತೇನೆ. ಇಬ್ಬರೂ ಪರಮ ವಾಚಾಳಿಗಳು. ಮೂರ್ನಾಲ್ಕು ತಾಸು ಮಾತಾಡುತ್ತಿರುತ್ತಾರೆ. ನನಗೆ ಒಂದೆರಡು ಪುಸ್ತಕಗಳನ್ನು ಓದಿದ ಸುಖ! ಅದರಲ್ಲೂ ಮೇಲಿಂದ ಮೇಲೆ ಚಕ್ಕುಲಿ, ಕೋಡಬೆಳೆ, ಬಿಸಿಬಿಸಿ ಕಾಫಿ ಬರುತ್ತಿದ್ದರೆ, ಹತ್ತಾರು ವರ್ಷಗಳ ಮೌನದಿಂದ ಎದ್ದು ಬಂದವರಂತೆ ಮಾತಾಡುತ್ತಿರುತ್ತಾರೆ. ಕೇಳಲು ಬಹಳ ರೋಚಕವಾಗಿರುತ್ತದೆ.

ಅಂದು ಮೋಹನ್ ಅವರ ಜತೆ ಬಂದಿದ್ದ ಸಜ್ಜನರೊಬ್ಬರು, 'ಸಾರ್, ಸುಧಾಮೂರ್ತಿಯವರೇ ಇಷ್ಟೆಲ್ಲಾ ಬರೆಯುತ್ತಾರಾ? ಅವರಿಗೆ ಬರೆಯಲು ಸಮಯ ಸಿರುತ್ತದಾ? ಇಷ್ಟೆಲ್ಲಾ ಪುಸ್ತಕಗಳನ್ನು ಅವರೇ ಬರೆದಿರುವುದಾ?' ಎಂದು ಕೇಳಿದ. ಸಂಪಾದಕರು ಏಕಾಏಕಿ ಗರಂ ಆದರು. 'ಏನು ನಿಮ್ಮ ಅಭಿಪ್ರಾಯ? ಈ ಪುಸ್ತಕಗಳನ್ನೆಲ್ಲಾ ಅವರು ಬೇರೆಯರಿಂದ ಬರೆಯಿಸಿ, ತಮ್ಮ ಹೆಸರಿನಲ್ಲಿ ಪ್ರಿಂಟ್ ಹಾಕಿಸಿಕೊಳ್ಳುತ್ತಾರೆ ಎಂಬ ಅಭಿಪ್ರಾಯವಾ? ಏನು ಮಾತಾಡುತ್ತೀರಾ? ಏನ್ರೀ, ನಿಮಗೆ ಅವರ ಬಗ್ಗೆ ಏನು ಗೊತ್ತು? ಯಾರ ಬಗ್ಗೆಯೂ ಲಘುವಾಗಿ ಮಾತಾಡಬೇಡಿ. ಅದರಲ್ಲೂ ಸುಧಾಮೂರ್ತಿಯವರ ಬಗ್ಗೆ ಹಾಗೆಲ್ಲ ಮಾತಾಡಬೇಡಿ' ಎಂದುಬಿಟ್ಟರು.

ತಕ್ಷಣ ಸಂಪಾದಕರು ತಮ್ಮ ಕಪಾಟನ್ನು ಜಾಲಾಡಿ, ತಮ್ಮ ಸಂಗ್ರಹದಲ್ಲಿರುವ ಒಂದು ಫೈಲನ್ನು ಆ ಸಜ್ಜನರ ಮುಂದಿಟ್ಟರು. ಅದು ಸುಧಾಮೂರ್ತಿಯವರ ಹಸ್ತಾಕ್ಷರಗಳ ಕಟ್ಟು ! ಆ ಮಹಾಶಯರು, 'ಸಾರ್, ಕ್ಷಮಿಸಿ.. ಏನೋ ತಪ್ಪು ನುಡಿದುಬಿಟ್ಟೆ, ನನಗೆ ಅವರ ಬಗ್ಗೆ ಗೌರವವಿದೆ. ಆದರೆ ಅವರ ಸಾಹಿತ್ಯ ಕೃಷಿ ಬಗ್ಗೆ ಅನುಮಾನವಿತ್ತು. ಅದನ್ನು ನೀವು ಪರಿಹರಿಸಿ ನನ್ನ ಕಣ್ಣು ತೆರೆಯಿಸಿದಿರಿ. ನನಗೆ ಸುಧಾಮೂರ್ತಿ ಅವರ ಬಗ್ಗೆ ಇನ್ನಷ್ಟು ಗೌರವ ಜಾಸ್ತಿಯಾಗುವಂತೆ ಮಾಡಿದಿರಿ, ಥ್ಯಾಂಕ್ಸ್' ಎಂದರು.

ಈ ಮಹಾಶಯರಂತೆ ಇನ್ನೂ ಅನೇಕರಿಗೆ ಸುಧಾಮೂರ್ತಿಯವರ ಬಗ್ಗೆ ಈ ರೀತಿಯ ಸಂಶಯ ಇರುವುದು ನನ್ನ ಗಮನಕ್ಕೂ ಬಂದಿದೆ. ಇದಕ್ಕೆ ಮೂಲ ಕಾರಣ ಸುಧಾಮೂರ್ತಿಯವರು ಶ್ರೀಮಂತರು ಎಂಬ ಕಾರಣಕ್ಕೆ. ಶ್ರೀಮಂತರಾದವರು ಸುಲಭಕ್ಕೆ Ghost Writer (ಬಾಡಿಗೆ ಲೇಖಕರು)ಗಳನ್ನು ಇಟ್ಟುಕೊಂಡು ಬರೆಯಿಸಬಹುದು ಎಂದು ಅನೇಕರು ಅವರಷ್ಟಕ್ಕೇ ಭಾವಿಸಿಬಿಡುತ್ತಾರೆ. 'ಲಕ್ಷ್ಮಿ ಇರುವಲ್ಲಿ ಸರಸ್ವತಿ ಇರುವುದಿಲ್ಲ' ಎಂಬ ಸ್ಥಾಪಿತ ನಿಯಮ ಅವರ ತಲೆಯಲ್ಲಿ ಚಕ್ಕಳಂಬಟ್ಟೆ ಹೊಡೆದು ಕುಳಿತಿರುತ್ತದೆ. ಈ ನಿಯಮವನ್ನು ಸುಧಾಮೂರ್ತಿಯವರಿಗೂ ಅನ್ವಯಿಸಿ ಒಂದು ನಿರ್ಧಾರಕ್ಕೆ ಬಂದುಬಿಡುತ್ತಾರೆ - ಸುಧಾಮೂರ್ತಿಯವರು ಬಾಡಿಗೆ ಲೇಖಕರನ್ನು ಇಟ್ಟುಕೊಂಡು ಬರೆಯಿಸುತ್ತಾರೆಂದು. ಒಂದು ವೇಳೆ ಈ ಸಂಗತಿ ಸುಧಾಮೂರ್ತಿಯವರ ಕಿವಿಗೆ ಬಿದ್ದರೆ ಎಷ್ಟು ಹಿಂಸೆಯಾಗಬಹುದು ? ಈ ಮಗು ನಿನ್ನದೇನಾ, ನೀನಾ ಹೆತ್ತಿದ್ದಾ ಅಥವಾ ಬಾಡಿಗೆ ತಾಯಿ ಹೆತ್ತಿದ್ದಾ ಎಂದು ಹೆತ್ತ ತಾಯಿಗೆ ಕೇಳಿದರೆ ಏನನಿಸಬೇಡ?

ಸುಧಾಮೂರ್ತಿಯವರು ಶ್ರೀಮಂತರು. ಅವರು ನಾರಾಯಣಮೂರ್ತಿಯವರನ್ನು ಮದುವೆ ಆಗುವ ತನಕ ಶ್ರೀಮಂತರಾಗಿರಲಿಲ್ಲ. ಮದುವೆಯಾಗುವಾಗಲೂ ನಾರಾಯಣಮೂರ್ತಿಯವರು ಹಣವಂತರಾಗಿರಲಿಲ್ಲ. ಇಡೀ ದೇಶವೇ ಹೆಮ್ಮೆ ಪಡುವ ಇನ್ಫೋಸಿಸ್ ಸಂಸ್ಥೆ ಸ್ಥಾಪಿಸಿ, ಆ ಮೂಲಕ ಅವರು ಹೇಗೆ ಧನಿಕರಾದರು ಎಂಬುದು ಸಮಸ್ತ ಲೋಕಕ್ಕೆ ಗೊತ್ತಿರುವ ಸಂಗತಿ. ಅವರೇನು ವಾಮಮಾರ್ಗದಿಂದ ಹಣ ಗಳಿಸಿದವರಲ್ಲ, ಆ ಹಣವನ್ನೆಲ್ಲಾ ಅವರು ಮಡಗಿಕೊಂಡು ಅವರು ಹಾಯಾಗಿ ಆರಾಮಾಗಿರಬಹುದಿತ್ತು. ಆದರೆ ಅವರು ಮಹಾದಾನಿಗಳೂ ಹೌದು. ಸಮಾಜಮುಖಿ ಕೆಲಸಗಳಿಗೆ ಅವರು ಸಾವಿರಾರು ಕೋಟಿ ಹಣವನ್ನು ದಾನ ನೀಡಿದ್ದಾರೆ. ಅವರು ಎಷ್ಟು ದಾನ ನೀಡಿದ್ದಾರೆಂಬುದು ಅವರಿಗೂ ಗೊತ್ತಿರಲಿಕ್ಕಿಲ್ಲ. ಅವರು ದಾನ ನೀಡಿದ ಕೆಲವು ಸಂಗತಿಗಳು ಮಾತ್ರ ಜನರಿಗೆ ಗೊತ್ತಿರಬಹುದು. ಆದರೆ ಯಾರಿಗೂ ಹೇಳದೇ, ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಾಗದಂತೆ ಅವೆಷ್ಟೋ ಕೋಟಿ ಹಣವನ್ನು ಅವರು ನೀಡಿದ್ದಾರೆ, ಯಾವುದೇ ಪ್ರಚಾರದ ಪ್ರತಿಫಲಾಪೇಕ್ಷೆ ಇಲ್ಲದೇ ತಾನು ನೀಡಿದ್ದನ್ನು ಯಾರಿಗೂ ಹೇಳಬಾರದೆಂದು ಕೈಯೆತ್ತಿ ಕೊಟ್ಟಿದ್ದಾರೆ.

ಇವನ್ನೆಲ್ಲ ಅವರು ಮಾಡಬೇಕೆಂಬ ನಿಯಮವೇನಿಲ್ಲ. ತಾವು ನ್ಯಾಯಯುತವಾಗಿ ದುಡಿದ ಹಣವನ್ನು ದಾನ ಮಾಡಬೇಕಿಲ್ಲ. ಅದನ್ನೆಲ್ಲಾ ಅವರೇ ಅನುಭವಿಸಬಹುದಿತ್ತು. ಹತ್ತಾರು ಫಾರೀನ್ ಕಾರು, ಎಕರೆಗಟ್ಟಲೆ ವಿಸ್ತೀರ್ಣದ ಮನೆ, ಕೆಜಿಗಟ್ಟಲೆ ಬಂಗಾರ, ಬ್ರ್ಯಾಂಡೆಡ್ ಬಟ್ಟೆ, ಪೋಷಾಕು, ಫಾರೀನ್ ಶಾಪಿಂಗ್ .. ಈ ಮೂಲಕ ವಿಲಾಸಿ ಜೀವನ ನಡೆಸಬಹುದಿತ್ತು. ಹಾಗೆ ಮಾಡಿದ್ದರೆ ಅವರನ್ನು ಯಾರೂ ಕೇಳುತ್ತಿರಲಿಲ್ಲ. ಅವರಂತಿರುವ ಬಹುಪಾಲು ಧನಿಕರು ಮಾಡುತ್ತಿರುವುದು ಅದನ್ನೇ ಅಲ್ಲವೇ? ಆದರೆ ಸುಧಾಮೂರ್ತಿಯವರು ಇಂದಿಗೂ ಈ ಎಲ್ಲಾ ಶೋಕಿಬಾಜಿಗಳಿಂದ ದೂರ. ಇಂದಿಗೂ ಅವರು ಆಡಂಬರದ ಜೀವನ ನಡೆಸುತ್ತಿಲ್ಲ. ಅವರ ಪೋಷಾಕು ನೋಡಿದರೆ ಅಪ್ಪಟ ಕನ್ನಡತಿ. ಅವರಲ್ಲಿ ಶ್ರೀಮಂತಿಕೆಯ ಯಾವ ಲಕ್ಷಣವೂ ಇಲ್ಲ, ಹೃದಯ ಶ್ರೀಮಂತಿಕೆ ಹೊರತಾಗಿ.

ಇದು ಬಹುತೇಕರಿಗೆ ಗೊತ್ತಿರುವ ವಿಷಯ. ಅವರು ಹಿಂದೊಂದು - ಮುಂದೊಂದು ರೀತಿಯ ಜೀವನ ನಡೆಸಿದವರಲ್ಲ. ಅವರದು ಬೂಟಾಟಿಕೆಯಿಲ್ಲದ ಬದುಕು. ಅವರು ಮನೆಯಲ್ಲಿ ಹೇಗೋ, ಸಾರ್ವಜನಿಕವಾಗಿಯೂ ಹಾಗೇ. ಅವರಿ ಇಂದಿಗೂ ಒಂದೇ ಒಂದು ತಪ್ಪು ನಡೆ, ಕಳಂಕವಿಲ್ಲದ ಜೀವನ ಕಟ್ಟಿಕೊಂಡು ಬಂದವರು. ಇಂದಿಗೂ ಮೌಲ್ಯಗಳನ್ನು ಗೌರವಿಸುತ್ತಾ, ಸಜ್ಜನಿಕೆಯ ಪರಿಧಿಯೊಳಗೆ, ಯಾವ ವಿವಾದವನ್ನೂ ಎಳೆದುಕೊಳ್ಳದೇ, ಪ್ರಚಾರಕ್ಕೆ ಹಪಹಪಿಸದೇ ತಾವಾಯಿತು, ತಮ್ಮ ಕೆಲಸವಾಯಿತು ಎಂದು ಇರುವವರು.

ಸುಧಾಮೂರ್ತಿಯವರು ಒಬ್ಬ ಲೇಖಕಿಯಾಗಿದ್ದರೆ ಈ ಗುಣವೇ ಕಾರಣ. ಲೇಖಕಿಯಾಗಿ ಅವರ ಬೇರುಗಳಿರುವುದು ಅವರ ಶ್ರೀಮಂತಿಕೆಯಲ್ಲಿ ಅಲ್ಲ, ಅವರ ಮಾನವೀಯತೆಯಲ್ಲಿ, ಅವರ ಹೃದಯ ಶ್ರೀಮಂತಿಕೆಯಲ್ಲಿ, ಅವರಿಗಿರುವ ಕಾಳಜಿ ಮತ್ತು ಬದ್ಧತೆಯಲ್ಲಿ. ಅವರಿಗೆ ಬರೆಯಲು ಸಾಧ್ಯವಾಗಿರುವುದು ಈ ಮೂಲದ್ರವ್ಯಗಳಿಂದ. ಅವರ ಶ್ರೀಮಂತಿಕೆಯ ಸೆಲೆಯಷ್ಟೇ ಅವರ ಬರಹಗಳ ಸೆಲೆಯೂ ಅಷ್ಟೇ ಧಾರಾಳವಾಗಿದೆ. ಅವರೊಬ್ಬ ಸೃಜನಶೀಲ ಲೇಖಕಿ, ಸಾಹಿತಿ. ಪ್ರಬಂಧ, ಅಂಕಣ, ಕತೆ, ಕಾದಂಬರಿ, ಪುರಾಣ, ಪ್ರವಾಸ, ಅನುಭವ ಕಥನ... ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡದಲ್ಲಿ ಅವರು ಬಿಡುವಿಲ್ಲದ, ಸದಾ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕಿ. ಅವರದು ಓದು, ಅಧ್ಯಯನ, ಪ್ರವಾಸ, ಸಂಶೋಧನೆ, ಸಂವಾದದಲ್ಲಿ ತೊಡಗಿರುವ ಕ್ರಿಯಾಶೀಲ ಮನಸ್ಸು. ಒಬ್ಬ ಲೇಖಕಿಗಿರುವ ಎಲ್ಲಾ ಗುಣ - ಸಿದ್ಧತೆಗಳನ್ನು ಮೈಗೂಡಿಸಿಕೊಂಡು ಪಕ್ವವಾಗುವ ಮನೋಧರ್ಮದವರು.

ಸುಧಾಮೂರ್ತಿಯವರು ಇಂದು ನೂರಕ್ಕೂ ಹೆಚ್ಚಿನ ಪುಸ್ತಕಗಳ ಲೇಖಕಿ. ಕನ್ನಡದಲ್ಲಿ ಬಹಳಷ್ಟು ಬರೆದವರ ಸಾಲಿಗೆ ಇವರೂ ಸೇರುತ್ತಾರೆ. ಹಾಗಂತ ತಮ್ಮ ಕತೆ, ಸ್ವಗತ, ಹಳವಂಡಗಳನ್ನು ಬರೆದುಕೊಂಡವರಲ್ಲ. ಇಂದು ಕನ್ನಡದ ಓದುಗಸ್ನೇಹಿ ಲೇಖಕಿಯರಲ್ಲಿ ಅವರು ಮುಂಚೂಣಿಯಲ್ಲಿರುವವರು. ಅವರ ಕೃತಿಗಳಿಗೆ ಓದುಗರು ಕಾಯುತ್ತಾರೆ. ಅವರ ಕೃತಿಗಳು ಮಾರಾಟದಲ್ಲೂ ಮುಂದು. ಅವರು ಅತ್ಯಂತ ಬೇಡಿಕೆಯಲ್ಲಿರುವ, ಜನಪ್ರಿಯ ಬರಹಗಾರ್ತಿ. ಕನ್ನಡದ ಯಾವ ಲೇಖಕಿಯರಿಗೂ ಇಲ್ಲದ fan following ಅವರಿಗಿದೆ. ಅದು ಅವರಿಗೆ ಗೊತ್ತಿರಲಿಕ್ಕಿಲ್ಲ. ಸುಧಾಮೂರ್ತಿಯವರ ಬರಹದ ಕ್ಯಾನ್ವಾಸ್ ಬಹಳ ವಿಸ್ತಾರವಾದುದು. ಅದಕ್ಕೆ ಅವರ ಬದುಕು, ಅನುಕೂಲ, ಜನಸಂಪರ್ಕ, ಜನಸಂಬಂಧ, ಅನುಭವ ಕಾರಣವಿದ್ದಿರಬಹುದು. ಇದು ಒಬ್ಬ ಬರಹಗಾರನಿಗೆ ಸಿಗಬಹುದಾದ ಹೆಚ್ಚುವರಿ ಅನುಕೂಲಗಳು. ಇವನ್ನು ಅವರು ತಮ್ಮ ಸೃಜನಶೀಲ ಬರವಣಿಗೆಗೆ ಸಾಮಗ್ರಿಯಾಗಿ ಬಳಸಿಕೊಂಡಿರುವುದನ್ನು ಅವರ ಕೃತಿಗಳಲ್ಲಿ ನೋಡಬಹುದು. ಹೀಗಾಗಿ ಅವರ ಕೃತಿಗಳಿಗೆ ಬಹುವಿಸ್ತಾರದ, ಬಹುವಿಶಾಲದ ನೋಟವಿದೆ. ಇಂಥ ಜೀವನಾನುಭವಗಳನ್ನು ಸಾಹಿತ್ಯವಾಗಿಸುವ ಅವರ ಕಾಳಜಿಯನ್ನು ಮೆಚ್ಚಲೇಬೇಕು. ಶ್ರೀಮಂತರಾದವರಿಗೆ ಈ ಸಂಗತಿಗಳು ಮುಖ್ಯವೆನಿಸುವುದಿಲ್ಲ. ಆದರೆ ಹೃದಯ ಶ್ರೀಮಂತರಾದವರಿಗೆ, ಅಕ್ಷರ ಸಾಂಗತ್ಯ ಬಯಸುವವರಿಗೆ ಅದನ್ನು ಸಾಹಿತ್ಯವಾಗಿಸದಿದ್ದರೆ ಸಮಾಧಾನವಾಗುವುದಿಲ್ಲ. ಸುಧಾಮೂರ್ತಿಯವರು ಇಂಥ ಅಕ್ಷರಮೋಹಕ್ಕೆ ಬಿದ್ದವರು.

ಸುಧಾಮೂರ್ತಿಯವರು ಇಂದು ಏನೇ ಬರೆಯಲಿ ಅದು ಭಾರತದ ಎಲ್ಲಾ ಭಾಷೆಗಳಿಗೂ ಅನುವಾದವಾಗುತ್ತವೆ. ಎಲ್ಲಾ ಭಾಷೆಗಳಲ್ಲೂ ಅವರಿಗೆ ಅಪಾರ ಸಂಖ್ಯೆಯ ಓದುಗರಿದ್ದಾರೆ. ಹಿಂದಿ, ಮರಾಠಿ, ಗುಜರಾತಿ, ತೆಲುಗು, ತಮಿಳು, ಒರಿಯ ಭಾಷೆಗಳಲ್ಲಂತೂ ಅವರು ಜನಪ್ರಿಯ ಲೇಖಕಿ. ಈ ಭಾಷೆಗಳ ಓದುಗರಿಗೆ ಅವರು ಎಲ್ಲಿಂದಲೋ ಬಂದವರಲ್ಲ. ತಮ್ಮದೇ ಭಾಷೆಯ ಹೆಣ್ಣುಮಗಳಂತೆ ಅವರನ್ನು ಪ್ರೀತಿಸುವ ಓದುಗ ಸಮೂಹವಿದೆ. ಇಂದು ಅವರು ದೇಶದ ಯಾವುದೇ ರಾಜ್ಯ, ಪ್ರದೇಶಕ್ಕೆ ಹೋದರೂ ಓದುಗರೊಂದಿಗೆ connect ಆಗುವ ಸಾಹಿತ್ಯಸಂಗವನ್ನು ಸಂಪಾದಿಸಿಕೊಂಡಿಕೊಂಡಿದ್ದಾರೆ. ಪ್ರಾಯಶಃ ಕನ್ನಡದ ಯಾವ ಲೇಖಕಿಯೂ ಈ ಎತ್ತರವನ್ನು ಏರಿಲ್ಲ. ಕನ್ನಡದ ಬೇರೆ ಯಾವ ಲೇಖಕಿಯ ಕೃತಿಗಳೂ ಇಷ್ಟೊಂದು ಭಾಷೆಗಳಿಗೆ ಅನುವಾದಗೊಂಡು ಸರ್ವಮಾನ್ಯತೆ ಪಡೆದಿಲ್ಲ. ಒಬ್ಬ ಬರಹಗಾರ್ತಿಯಾಗಿ ಅಂಥ ಔನ್ನತ್ಯವನ್ನು ಸುಧಾಮೂರ್ತಿಯವರು ಸಾಧಿಸಿರುವುದು ಕನ್ನಡಿಗರ ಸಮಾಧಾನ, ಹೆಮ್ಮೆ. ಸಾಹಿತ್ಯದಲ್ಲಿ ಲಿಂಗಭೇದ ಮಾಡದಿದ್ದರೆ, ಸುಧಾಮೂರ್ತಿಯವರ ಕನ್ನಡ ಕೃತಿಗಳೇ ಬೇರೆ ಭಾಷೆಗಳಿಗೆ ಅತಿ ಹೆಚ್ಚು ಅನುವಾದಗೊಂಡಿರುವುದು ಎಂಬುದು ಗಮನಾರ್ಹ.

ಸುಧಾಮೂರ್ತಿಯವರ ಇನ್ನೊಂದು ಹೆಚ್ಚುಗಾರಿಕೆಯೆಂದರೆ, ಅವರು ಕನ್ನಡದಂತೆ ಇಂಗ್ಲಿಷಿನಲ್ಲೂ ಅಷ್ಟೇ ಚೆಂದವಾಗಿ ಬರೆಯಬಲ್ಲರು. ಅವರು ಒಂಥರಾ ರೈಟ್ ಹ್ಯಾಂಡ್ ಬ್ಯಾಟ್ಸಮನ್ ಮತ್ತು ಲೆಫ್ಟ್ ಹ್ಯಾಂಡ್ ಬೌಲರ್ ಇದ್ದಂತೆ. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಸರಾಗವಾಗಿ ಬರೆಯಬಲ್ಲರು. ಈ ಎರಡೂ ಭಾಷೆಗಳನ್ನು ಸುಧಾಮೂರ್ತಿಯವರಂತೆ ಪರಿಣಾಮಕಾರಿಯಾಗಿ ದುಡಿಸಿಕೊಂಡ ಮತ್ತೊಬ್ಬ ಕನ್ನಡದ ಲೇಖಕಿಯಿಲ್ಲ. ಈ ಕಾರಣದಿಂದ ಸುಧಾಮೂರ್ತಿಯವರ ಸಾಹಿತ್ಯ ಕ್ಷಿತಿಜ ಹಿರಿದಾದುದು. ಅವರು ಕನ್ನಡ ಸಾಹಿತ್ಯ ಕಣ, ದ್ರವ್ಯಗಳನ್ನು ಅಂತಾರಾಷ್ಟ್ರೀಯ ಅಂತರಿಕ್ಷದಲ್ಲಿ ಹಾರಿಬಿಡಬಲ್ಲರು. ಈ ಕಾರಣದಿಂದಲೂ ಅವರು ವಿಶೇಷವಾಗಿ ಗಮನ ಸೆಳೆಯುತ್ತಾರೆ. ಇಂದು ದೇಶದ ಯಾವುದೇ ಭಾಷೆಯ ಸಾಹಿತ್ಯ ಸಮ್ಮೇಳನಗಳಲ್ಲಿ, ಸಾಹಿತ್ಯಗೋಷ್ಠಿಗಳಲ್ಲಿ, ಸಂವಾದದಲ್ಲಿ ಅವರಿಗೆ ಅಗ್ರತಾಂಬೂಲ. ಜೈಪುರ ಲಿಟ್ ಫೆಸ್ಟಿವಲ್ ಗಳಲ್ಲಿ ವಿಶೇಷ ಗೌರವ. ಇದು ಕೇವಲ ಸುಧಾಮೂರ್ತಿ ಎಂಬ ಒಬ್ಬ ಮಹಿಳೆಯ ಸಾಧನೆಯಲ್ಲ, ಇಂಥ ಸಾಹಿತ್ಯಸಂಸ್ಕಾರ , ಪರಿಸರವನ್ನು ಸಂಪನ್ನಗೊಳಿಸಿದ ಕನ್ನಡದ ಹಿರಿಮೆ - ಗರಿಮೆಯೂ ಹೌದು. ಕನ್ನಡದ ಒಬ್ಬ ಲೇಖಕಿ ಅಂತಾರಾಷ್ಟ್ರೀಯ ಮಟ್ಟ ತಲುಪಿದ ನೆಮ್ಮದಿಯ ವಿಚಾರವೂ ಹೌದು.

ಆದರೆ ದುರ್ದೈವದ ಸಂಗತಿಯೆಂದರೆ, ಕನ್ನಡಿಗರಿಗೆ ಸುಧಾಮೂರ್ತಿಯವರ ಸಾಹಿತ್ಯ ಕೃತಿಗಳ ಮಹತ್ವವೇ ಗೊತ್ತಾಗಿಲ್ಲ, ಕನ್ನಡದ ವಿಮರ್ಶಕರು ಸುಧಾಮೂರ್ತಿಯವರನ್ನು ಈ ಕಾಲಘಟ್ಟದ ಮಹತ್ವದ ಸಾಹಿತಿ ಎಂದು ಪರಿಗಣಿಸಿಯೇ ಇಲ್ಲ. (ಈ ವಿಮರ್ಶಕರನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಿಲ್ಲ ಎಂಬುದು ಬೇರೆ ವಿಚಾರ. ಡಾ.ಎಸ್.ಎಲ್. ಭೈರಪ್ಪನವರು ಮೂವತ್ತು ಕಾದಂಬರಿ ಬರೆದರೂ ಅವರ ಕೃತಿಗಳನ್ನು ವಿಮರ್ಶೆ ಮಾಡದೇ, ಅವರನ್ನು ಉದ್ದೇಶಪೂರ್ವಕವಾಗಿ ನಿರಾಕರಿಸುತ್ತಾ, ನಿರ್ಲಕ್ಷಿಸುತ್ತಾ ಬಂದಿದ್ದನ್ನು ನೋಡಿಲ್ಲವೇ ? ಅಂದರೆ ಅಲ್ಲಿಯವರೆಗೆ ಕನ್ನಡ ವಿಮರ್ಶಕರು ಡಾ.ಭೈರಪ್ಪನವರನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.) ಕನ್ನಡದ ಯಾವ ಘನಂದಾರಿ ವಿಮರ್ಶಕನೂ, ಸುಧಾಮೂರ್ತಿಯವರ ಕೃತಿಗಳನ್ನು ಸಾಹಿತ್ಯವಿಮರ್ಶೆಯ ಮೂಸೆಯಲ್ಲಿ ಅಧ್ಯಯನಕ್ಕೆ ಮುಂದಾಗಿಲ್ಲ. ಅವರಿಗೆ ಅದೊಂದು ವಿಮರ್ಶನಕ್ಕೆ ಯೋಗ್ಯವಾದುದು ಎಂದು ಅನಿಸಿಲ್ಲ. ಇದರಿಂದ ಸುಧಾಮೂರ್ತಿಯವರಿಗೆ ಯಾವ ಹಾನಿಯೂ ಇಲ್ಲ, ಅದು ಕನ್ನಡ ಸಾಹಿತ್ಯಕ್ಕೆ ಆದ ನಷ್ಟ, ಅಪಚಾರ. ವಿಮರ್ಶಕರ ಕಸುಬಿಗೆ, ಸಾಹಿತ್ಯಧರ್ಮಕ್ಕೆ ಆದ ಹಾನಿ. ಕನ್ನಡದ ವಿಮರ್ಶಕರ ವಲಯದಲ್ಲಿ ಇಂದಿಗೂ ಸುಧಾಮೂರ್ತಿಯವರು ಕಾರ್ಪೊರೇಟ್ ಲೇಖಕಿ. ಒಂದು ಸಾಹಿತ್ಯ ಕೃತಿಯನ್ನು ಅಥವಾ ಸಾಹಿತಿಯನ್ನು ಈ ರೀತಿ ನೋಡುವುದೇ ಡೇಂಜರಸ್. ಕನ್ನಡದ ವಿಮರ್ಶಕರು ಇನ್ನೂ ಯಾವ ಕಾಲದಲ್ಲಿ ಇದ್ದಾರೋ? ಗೊತ್ತಿಲ್ಲ.

ಒಂದು ಕೃತಿ ಅಥವಾ ಕೃತಿಕಾರ ಓದುಗರ ಮಧ್ಯೆ ಗುರುತಿಸಿಕೊಂಡು ಸರ್ವಮಾನ್ಯನಾದರೆ ಅದಕ್ಕಿಂತ ದೊಡ್ಡ ವಿಮರ್ಶನ ಮೀಮಾಂಸೆ ಮತ್ತೊಂದಿಲ್ಲ. ಸುಧಾಮೂರ್ತಿಯವರು ಅಷ್ಟರಮಟ್ಟಿಗೆ ಓದುಗರ ಪ್ರೀತಿ ಗಳಿಸಿ ಮತ್ತಷ್ಟು ಶ್ರೀಮಂತರಾಗಿದ್ದಾರೆ. ಓದುಗರಿಗೆ ಅನುಭವ ಶ್ರೀಮಂತಿಕೆ ನೀಡಿದ್ದಾರೆ. ಒಬ್ಬ ಬರಹಗಾರ್ತಿಯಿಂದ ಅದಕ್ಕಿಂತ ದೊಡ್ಡ ಸಾಹಿತ್ಯ ಸೇವೆ ಮತ್ಯಾವುದಿದೆ?

ಧನ್ಯತೆಗೆ ಅಷ್ಟು ಸಾಕು.

ಭೂಮಿಯ ಸನ್‌ಸ್ಕ್ರೀನ್ - ಓಝೋನ್ ಪದರಕ್ಕೆ ರಂಧ್ರ !

ತನ್ನಿಮಿತ್ತ

ಗುರುರಾಜ್ ಎಸ್ ದಾವಣಗೆರೆ

gururajsmurthy@gmail.com

ಮುಂಬೈ ಮೂಲದ ಎಸ್ಸೆಲ್ ಗ್ರೂಪ್ ಒಡೆತನದ ಅಂತಾರಾಷ್ಟ್ರೀಯ ಆಂಗ್ಲ ಸುದ್ದಿ ಮಾಧ್ಯಮ ಸಂಸ್ಥೆ ವರ್ಲ್ಡ್ ಈಸ್ ಒನ್ ನ್ಯೂಸ್ (MLK) ಕಳೆದ ಮಾರ್ಚ್ 28ರಂದು ಸುದ್ದಿಯೊಂದನ್ನು ಬಿತ್ತರಿಸಿ ಕರೋನಾ ಲಾಕ್‌ಡೌನ್‌ನಿಂದ ವಿಶ್ವದ ವಿವಿಧ ಭಾಗಗಳ ವಾತಾವರಣದಲ್ಲಿ ಗಾಳಿ ತಿಳಿಯಾಗಿದೆ, ನದಿಗಳ ನೀರು ಶುದ್ಧವಾಗಿದೆ ಮಾಲಿನ್ಯ ಕಡಿಮೆಯಾಗಿದೆ ಎಂದು ಹೇಳುತ್ತ ಆರ್ಕ್‌ಟಿಕ್ ಭಾಗದ ಮೇಲಿನ ಓಝೋನ್ ಪದರದ ರಂಧ್ರ ಮುಚ್ಚಿ ಹೋಗಿದೆ ಎಂದು ಘೋಷಿಸಿ ಬಿಟ್ಟಿತು. ಹಾಗಂದದ್ದೇ ತಡ. ಶುರುವಾಯಿತು ನೋಡಿ ನೆಟ್ಟಿಗರ ಸಂಭ್ರಮ ಮತ್ತು ತಳಮಳ! ಮಾಧ್ಯಮಗಳಲ್ಲಿ ಹರಿದಾಡುವ ಸುದ್ದಿಯನ್ನೇ ಆಹಾರ ಮಾಡಿಕೊಂಡ ಲಕ್ಷಾಂತರ ನೆಟ್ ಬಳಕೆದಾರರು ಶಹಬ್ಬಾಸ್, ವೆರಿಗುಡ್ ಎಂದು ಕಮೆಂಟು, ಲೈಕು ಹಾಕಿ ಜಗತ್ತಿನ ಮೂಲೆ ಮೂಲೆಗೆಲ್ಲಾ ಸುದ್ದಿಯನ್ನು ಶೇರ್ ಮಾಡಿ ನಿರುಮ್ಮಳರಾದರು. ಸುದ್ದಿ ಕೇಳಿ ಸಿಟ್ಟಾದವರು ಇದೆಂಥ ಅತಿರೇಕ? ಲಾಕ್‌ಡೌನ್‌ನಿಂದ ನಾವೆಲ್ಲ ಕಾರು, ಬಸ್ಸು, ಬೈಕು, ರೈಲು ಓಡಿಸದೆ, ಫ್ಯಾಕ್ಟರಿ ನಡೆಸದೆ, ಡೀಸೆಲ್ ಉರಿಸದೆ ಇದ್ದುದರಿಂದ ನೀರು - ಗಾಳಿ - ಹವೆ ಶುದ್ಧವಾಗಿದೆ ಎಂದು ಹೇಳಿ - ನಮ್ಮನ್ನು 'ಭೂಮಿಯ ಕಳೆ' ಎಂದು ಚಿತ್ರಿಸಿದ್ದು ಎಷ್ಟು ಸರಿ ಎಂದು ರೇಗಿ ಯುಟ್ಯೂಬ್‌ನಲ್ಲಿದ್ದ ಆ ವಿಡಿಯೋ ತುಣುಕಿಗೆ ಉಲ್ಟಾ ಹೆಬ್ಬೆರಳಿನ ಚಿತ್ರ ಹಾಕಿ, ಮಲ್ಟಿಪಲ್ ಡಿಸ್‌ಲೈಕ್ ಮಾಡಿ, ಶೂನ್ಯ ರೇಟಿಂಗ್ ನೀಡಿ ಈ ಅನಿಷ್ಟವನ್ನು ಬೆನ್ನುಹತ್ತಿದ ಇಂಡಿಯಾ ಟುಡೇ ಪತ್ರಿಕೆಯ 'ಸುಳ್ಳು ಸುದ್ದಿ ಪತ್ತೆ ವಿಭಾಗ'ದವರು ವಿಜ್ಞಾನಿಗಳನ್ನು ಮಾತನಾಡಿಸಿ ನೀವೇನಂತೀರಿ? ಎಂದು ಕೇಳಿದರು.

ಆರ್ಕ್‌ಟಿಕ್ ಪ್ರದೇಶದ ಓಝೋನ್ ರಂಧ್ರ, ಕ್ಲೋಸ್ ಆಗಿರುವುದು ನಿಜ, ಆದರೆ ಅದು ಲಾಕ್‌ಡೌನ್ ಎಫೆಕ್ಟ್‌ನಿಂದ ಆದದ್ದಲ್ಲ ಬಹಳ ದಿನಗಳಿಂದ ಧ್ರುವಪ್ರದೇಶದಲ್ಲಿ ಶೇಖರಣೆಗೊಂಡಿದ್ದ ಬಲಶಾಲಿ ಮತ್ತು ಬೃಹತ್ ಶೀತಗಾಳಿಯ ಹಿಂಡು ಮೇಲೆ ಚಲಿಸಿದ್ದಕ್ಕೆ ಆ ಭಾಗದಲ್ಲಿದ್ದ ರಂಧ್ರ ಮುಚ್ಚಿಕೊಂಡಿದೆ ಎಂದಿರುವ ಯುರೋಪಿನ ಕಣ್ಣು ಎಂದೇ ಪ್ರಸಿದ್ಧಿ ಪಡೆದಿರುವ ಕೋಪರ್ನಿಕಸ್ ಅಟ್ಮಾಸ್ಫಿಯರ್ ಮಾನಿಟರಿಂಗ್ ಸರ್ವಿಸ್‌ನ ವಿಜ್ಞಾನಿಗಳು ಏಪ್ರಿಲ್ 20ರಂದು ಅಧಿಕೃತ ಹೇಳಿಕೆ ನೀಡಿ ಗೊಂದಲಕ್ಕೆ ತೆರೆ ಎಳೆದಿದ್ದಾರೆ.

'ಯುರೋ ನ್ಯೂಸ್'ಗೆ ಸಂದರ್ಶನ ನೀಡಿರುವ ಕ್ಯಾಮ್ಸನ ವಿಜ್ಞಾನಿ ಆಂಜೆ ಇನ್ನೆಸ್ ಈ ಛಳಿಗಾಲದಲ್ಲಿ ಧ್ರುವ ಪ್ರದೇಶದಿಂದ ಬೀಸಿದ ಶೀತಗಾಳಿ ಹಿಂದೆಂದಿಗಿಂತ ಬಲಶಾಲಿಯಾಗಿತ್ತು ಮತ್ತು ಸೊನ್ನೆಗಿಂತ ಕಡಿಮೆ ಉಷ್ಣಾಂಶ ಹೊಂದಿದ್ದರಿಂದ ಈ ಪವಾಡ ಸಂಭವಿಸಿದೆಯೇ ಹೊರತು ಲಾಕ್‌ಡೌನ್‌ನಿಂದ ಇದು ಆಗಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಆರ್ಕ್‌ಟಿಕ್ ಪ್ರದೇಶದಲ್ಲಿ ಬಹಳ ದಿನಗಳಿಂದ ಶೇಖರಣೆಗೊಂಡಿದ್ದ ಸೊನ್ನೆಗಿಂತ ಕಡಿಮೆ ಉಷ್ಣಾಂಶದ ಬೃಹತ್ ಹಾಗೂ ಬಲಶಾಲಿ ಶೀತ ಮಾರುತ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಧ್ರುವ ಭಾಗಕ್ಕೆ ಚಲಿಸಿ, ಅಲ್ಲಿಯೇ ಸ್ಥಗಿತಗೊಂಡು ನಾವು ಬಳಸಿದ ಕ್ಲೋರೋ ಫ್ಲೋರೋ ಕಾರ್ಬನ್ (ADA) ಮತ್ತು ಬ್ರೋಮೋ ಫ್ಲೋರೋಕಾರ್ಬನ್‌ಗಳಿಂದ ಹೊಮ್ಮಿದ ಕ್ಲೋರಿನ್ ಮತ್ತು ಬ್ರೋಮಿನ್‌ಗಳೊಂದಿಗೆ ವರ್ತಿಸಿ ಅಲ್ಲಿನ ಓಝೋನ್‌ನ ಅಣುಗಳನ್ನೆಲ್ಲಾ ಕಬಳಿಸಿದಾಗ ರಂಧ್ರ ಉಂಟಾಯಿತು ಮತ್ತು ಸ್ಥಿತಿ ಒಂದು ತಿಂಗಳಿಗೂ ಹೆಚ್ಚುಕಾಲ ಹಾಗೇ ಮುಂದುವರಿಯಿತು. ಏಪ್ರಿಲ್ ಕೊನೆಯ ಹೊತ್ತಿಗೆ ಶೀತಗಾಳಿಯ ಹಿಂಡು ಒಡೆದು ಹೋಗಿ ಓಝೋನ್‌ಯುಕ್ತ ಗಾಳಿ ಅಲ್ಲಿಗೆ ನುಗ್ಗಿದ್ದರಿಂದ ಬೃಹತ್ ರಂಧ್ರ ಮುಚ್ಚಿಕೊಂಡಿತು ಎಂದು ವಿವರಿಸಿರುವ ಇನ್ನೆಸ್ ಸದ್ಯಕ್ಕೆ ದೊಡ್ಡ ಗಂಡಾಂತರದಿಂದ ಪಾರಾಗಿದ್ದೇವೆ ಎಂದಿದ್ದಾರೆ.

ಅಲ್ಲದೆ ಏಕೆ ಹೀಗಾಯಿತು ಎಂಬುದಕ್ಕೆ ವಸ್ತುನಿಷ್ಠ ಪ್ರಯೋಗಾತ್ಮಕ ಅಧ್ಯಯನ ಶುರುವಾಗಿದೆ ಎಂದಿದ್ದಾರೆ. ಹತ್ತು ಲಕ್ಷ ಚದರ ಕಿ.ಮೀ.ನಷ್ಟು ದೊಡ್ಡ ರಂಧ್ರ ಮುಚ್ಚಿರುವುದು ಸಹಜವಾಗಿಯೇ ವಿಜ್ಞಾನಿಗಳಿಗೆ, ಹವಾಮಾನ ತಜ್ಞರಿಗೆ, ದೇಶ ಆಳುವ ನಾಯಕರಿಗೆ ಖುಷಿ ತಂದಿದೆ. ಮೂರು ದಶಕಗಳ ಅವಿರತ ಪ್ರಯತ್ನ ಫಲ ನೀಡಿದೆ ಎಂದಿರುವ ತಜ್ಞರು 'ಸಮಸ್ಯೆ ಪರಿಹಾರಗೊಂಡಿದೆ ಎಂದು ಮೈ ಮರೆಯುವಂತಿಲ್ಲ' ಮುಚ್ಚುವಿಕೆ ಶಾಶ್ವತವೇನೂ ಅಲ್ಲ, ಅದು ಮತ್ತೆ ತೆರೆದುಕೊಳ್ಳದಂತೆ ಭೂಮಿಯ ಮೇಲೆ ನಮ್ಮ ಕೆಲಸಗಳನ್ನು ನಾಜೂಕಾಗಿ ನಡೆಸಬೇಕು ಎಂದು ಎಚ್ಚರಿಸಿದ್ದಾರೆ.

ಭೂಮಿಯನ್ನು ಆವರಿಸಿರುವ ಓಝೋನ್ ಪದರಕ್ಕೆ ತೂತು ಬೀಳುವುದು ನಾವು ಪ್ರತಿ ನಿತ್ಯ ಬಳಸುವ ಬಸ್ಸು - ಕಾರು - ರೈಲುಗಳ ಡೀಸೆಲ್ ಹೊಗೆ, ರಸಗೊಬ್ಬರ, ಪೇಂಟ್‌ಗಳು ಹೊಮ್ಮಿಸುವ ಮಾಲಿನ್ಯ ಮತ್ತು ಏಸಿ, ನೋವು ನಿವಾರಕ ಸ್ಪ್ರೇ, ಸುಗಂಧ ಸೂಸುವ ತುಂತುರು ಡಬ್ಬಿ, ಫ್ರಿಡ್ಜ್‌ಗಳಲ್ಲಿ ಬಳಸುವ ಕ್ಲೋರೋಫ್ಲೋರೋ ಕಾರ್ಬನ್ ಮತ್ತು ಬ್ರೋಮೋಫ್ಲೋರೋ ಕಾರ್ಬನ್‌ಗಳಿಂದ. ಮೊದಲ ಸಲ, 1980 ರಲ್ಲಿ ಅಂಟಾರ್ಟಿಕಾದ ಮೇಲಿನ ವಾಯುಮಂಡಲದ ಓಝೋನ್ ಪದರಕ್ಕೆ ತೂತಾಗಿದೆ ಎಂಬ ಮಾಹಿತಿ ಸಿಕ್ಕ ತಕ್ಷಣ ಫೀಲ್ಡಿಗಿಳಿದ ನ್ಯಾಶನಲ್ ಓಶಿಯಾನಿಕ್ ಅಂಡ್ ಅಟ್ಮಾಸ್ಫಿಯರಿಕ್ ಅಡ್ಮಿನಿಸ್ಟ್ರೇಶನ್‌ನ ವಿಜ್ಞಾನಿಗಳು ವಾತಾವರಣದಲ್ಲಿನ ಸ್ವತಂತ್ರ ಕ್ಲೋರಿನ್ ಅಣು ಮತ್ತು ಕ್ಲೋರಿನ್ ಮಾನಾಕ್ಸೈಡ್‌ನಿಂದ ತೂತಾಗಿದೆ ಎಂದು ಕಂಡು ಹಿಡಿದು ಪರಿಹಾರವನ್ನೂ ಸೂಚಿಸಿದರು.

ಸರಿ ಸುಮಾರು ನೂರು ರಸಾಯನಿಕಗಳಿಂದ ಓಝೋನ್ ಪದರಕ್ಕೆ ಅಪಾಯವಿದೆ ಎಂದು ಸಂಶೋಧನೆಯಾದ ಮೇಲೆ 1987ರಲ್ಲಿ ಸಭೆಸೇರಿ ಮಾಂಟ್ರಿಯಲ್ ಒಪ್ಪಂದಕ್ಕೆ ಸಹಿಹಾಕಿದ 197 ದೇಶಗಳ ನಾಯಕರು ಆಯಿತು ಸಿಎಫ್‌ಸಿ ಮತ್ತು ಸಿಎಫ್‌ಸಿಗಳ ಬಳಕೆ ನಿಲ್ಲಿಸಿ ವಿಜ್ಞಾನಿಗಳು ರೆಕಮೆಂಡ್ ಮಾಡಿರುವ ಹೈಡ್ರೋ ಕ್ಲೋರೋ ಫ್ಲೋರೋ ಕಾರ್ಬನ್ ಬಳಸುತ್ತೇವೆ ಎಂದರು. ಮುಂದುವರಿದ ರಾಷ್ಟ್ರಗಳು 2004ರಲ್ಲಿ ಸಿಎಫ್‌ಸಿ ಮತ್ತು ಬಿಎಫ್‌ಸಿಗಳ ಉತ್ಪಾದನೆ ಮತ್ತು ಬಳಕೆಯನ್ನು ನಿಷೇಧಿಸಿದವು. ನಾವು ಅದನ್ನು ಮಾಡಿದ್ದು 2010ರಲ್ಲಿ. ಆ ವೇಳೆಗೆ ಎಚ್‌ಸಿಎಫ್‌ಸಿ ಅಂದರೆ ಹೈಡ್ರೋ ಕ್ಲೋರೋ ಫ್ಲೋರೋ ಕಾರ್ಬನ್‌ಗಳೂ ಸೇಫ್ ಅಲ್ಲ ಮತ್ತು ಅವುಗಳಿಂದ ಓಝೋನ್ ಪದರಕ್ಕೆ ತಕ್ಕಮಟ್ಟಿಗೆ ಅಪಾಯವಿದೆ ಎಂದು ತಿಳಿದದ್ದಲ್ಲದೆ ಅವು ಭೂಮಿಯ ಬಿಸಿಯನ್ನು ಹೆಚ್ಚಿಸುವ ಕಾರ್ಬನ್ ಡೈ ಆಕ್ಸೈಡ್‌ಗಿಂತ ಸಾವಿರಾರು ಪಟ್ಟು ಹೆಚ್ಚು ಭೂಮಿ ಬಿಸಿ ಮಾಡುವ ಶಾಖ ವರ್ಧಕಗಳು ಎಂದು ತಿಳಿದುಬಂತು. ಒಂದು ರೀತಿಯಲ್ಲಿ 'ಊದುವುದನ್ನು ಕೊಟ್ಟು ಒದರುವುದನ್ನು ತೆಗೆದು ಕೊಂಡಂತಾಯಿತು' ಎಂದು ಸಂಕಟಕ್ಕೆ ಬಿದ್ದ ಮೊಂಟ್ರಿಯಲ್ ಒಪ್ಪಂದದ ರೂವಾರಿಗಳು 2016ರಲ್ಲಿ ರುವಾಂಡದ ಕಿಗಳಿಯಲ್ಲಿ ಸಭೆ ಸೇರಿ 2030ರ ವೇಳೆಗೆ ಎಚ್‌ಸಿಎಫ್‌ಸಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ನಿರ್ಧರಿಸಿದರು. ಅದಕ್ಕೆ ವಿಶ್ವದ 81 ದೇಶಗಳು ಮಾತ್ರ ಸಹಿ ಮಾಡಿದ್ದು ಭಾರತ, ಚೀನಾ ಮತ್ತು ಅಮೆರಿಕ ಸದ್ಯಕ್ಕೆ ಸಾಧ್ಯವಿಲ್ಲ ಎಂದಿವೆ. ಆದರೂ ಕ್ರಮೇಣ ಮಾಡುತ್ತೇವೆ ಎಂದು ಭರವಸೆ ನೀಡಿ ತಮ್ಮ ತಮ್ಮ ದೇಶಗಳಲ್ಲಿ ಆ ನಿಟ್ಟಿನಲ್ಲಿ ಏನೇನು ಸಾಧ್ಯ ಎಂದು ಯೋಜನೆ ರೂಪಿಸಿವೆ.

WORLD
OZONE DAY
16 SEPTEMBER

ಕಿಗಳಿ ಒಪ್ಪಂದ ಕಳೆದ ಜನವರಿಯಿಂದ ಜಾರಿಗೆ ಬಂದಿದೆ. ಶೀತಲೀಕರಣ ಉದ್ಯಮಗಳಲ್ಲಿ ಎಚ್‌ಸಿಎಫ್‌ಸಿಗಳ ಬಳಕೆ ಅತ್ಯಧಿಕವಾಗಿದ್ದು ರೈತರು ಬೆಳೆದ ಬೆಳೆಯನ್ನು ಕಾಪಾಡುವ ಕೋಲ್ಡ್ ಸ್ಟೋರೇಜ್ ಮತ್ತು ಗ್ರಾಹಕರು ಬಳಸುವ ಎಸಿ, ರೆಫ್ರಿಜರೇಟರ್‌ಗಳಿಗೆ ಅದು ಬೇಕೇ ಬೇಕು. ಅದಕ್ಕಾಗಿ ಇಂಡಿಯ ಕೂಲಿಂಗ್ ಆಕ್ಷನ್ ಪ್ಲಾನ್ ಪ್ರಾರಂಭಿಸಿರುವ ಕೇಂದ್ರ ಸರಕಾರ ಇನ್ನೂ ಇಪ್ಪತ್ತು ವರ್ಷಗಳಲ್ಲಿ ಶೀತಲೀಕರಣ ಉದ್ಯಮದ ಬೇಡಿಕೆ 8 ಪಟ್ಟು ಹೆಚ್ಚಲಿದೆ. 2038ರ ವೇಳೆಗೆ ಎಚ್‌ಸಿಎಫ್‌ಸಿ ಮೇಲಿನ ನಮ್ಮ ಅವಲಂಬನೆ ಶೇ.30ರಷ್ಟು ಕಡಿಮೆಯಾಗಬಹುದು ಎಂದಿದೆ. ಸಂಪೂರ್ಣ ನಿಷೇಧಕ್ಕೆ 2050ರವರೆಗೂ ಸಮಯ ಹಿಡಿಯಬಹುದು ಎಂಬ ಅಂದಾಜಿದೆ. ವಿಶ್ವದ ಹವಾನಿಯಂತ್ರಕ ವ್ಯವಸ್ಥೆಯ ಬೇಡಿಕೆಯ ಶೇ.80ರಷ್ಟನ್ನು ಪೂರೈಸುತ್ತಿರುವ ಚೀನಾ ನಮಗೂ ಸಮಯ ಬೇಕು ಎಂದಿದ್ದು ನಮ್ಮ ತಂತ್ರಜ್ಞಾನ ಬಳಸಿ ಸಾಧ್ಯವಾದಷ್ಟು ಸಹಕರಿಸುತ್ತೇವೆ ಎಂಬ ಭರವಸೆ ನೀಡಿದೆ. ನಾವು ನಮ್ಮ ಫ್ರಿಜ್ ಮತ್ತು ಎಸಿಗಳಲ್ಲಿ ಎಚ್‌ಸಿಎಫ್‌ಸಿ -22 ಕ್ಲೋರೋ ಡೈಫ್ಲೋರೋ ಮೀಥೇನ್ ಸಂಯುಕ್ತವನ್ನು ಬಳಸುತ್ತಿದ್ದೇವೆ. ಇದರ ಉತ್ಪಾದನೆಯ ಜೊತೆಗೆ ಬೈಪ್ರಾಡಕ್ಟಾಗಿ ಹೊಮ್ಮುವ ಎಚ್‌ಸಿಎಫ್‌ಸಿ - 23 ಕ್ಲೋರೋ ಟ್ರೈಫ್ಲೋರೋ ಮೀಥೇನ್ ಸಂಯುಕ್ತ ಭೂಮಿಯ ಶಾಕ ವರ್ಧಿಸುವುದರಿಂದ ನಾವೂ ಸಹ ಬೇರೆ ಮಾರ್ಗ ಹುಡುಕಬೇಕಿದೆ. ಸಿಎಫ್‌ಸಿ, ಎಚ್‌ಸಿಎಫ್‌ಸಿಗಳ ಬದಲಿಗೆ ಅತ್ಯುತ್ತಮ ಶೀತಕಾರಕಗಳು ಮತ್ತು ಕಡಿಮೆ ಶಾಕವರ್ಧಕಗಳಾದ ಬುಟೇನ್ ಮತ್ತು ಪ್ರೊಪೇನ್‌ಗಳನ್ನು ಬಳಸುವ ಅವಕಾಶವಿದೆ. ಆದರೆ ಬಳಸಲು ಪರವಾನಗಿ ಇಲ್ಲ, ಅಲ್ಲದೆ ಇವು ತೀವ್ರವಾಗಿ ದಹಿಸುವ ಗುಣ ಹೊಂದಿರುವುದರಿಂದ ಬಳಸುವಾಗ ಭಾರಿ ಎಚ್ಚರಿಕೆ ವಹಿಸಬೇಕಾಗುತ್ತದೆ.

ಒಂದೆಡೆ ಓಝೋನ್ ಪದರದ ರಂಧ್ರ ಮುಚ್ಚಿದೆ ಎಂದು ಸಂತಸ ಪಡುತ್ತಿದ್ದೇವೆ. ಅದಕ್ಕಾಗಿ ಸಿಎಫ್‌ಸಿ ಬಳಕೆ ನಿಲ್ಲಿಸಿದ್ದೇವೆ. ಈಗ ಬಳಸುತ್ತಿರುವ ಎಚ್‌ಎಫ್‌ಸಿಗಳಿಂದ ಭೂಮಿಯ ಬಿಸಿ ಏರುತ್ತಿದೆ. ಒಟ್ಟಿನಲ್ಲಿ ಒಂದನ್ನು ಪಡೆದುಕೊಳ್ಳಲು ಇನ್ನೊಂದನ್ನು ಬಿಡಬೇಕು ಎಂಬಂತಾಗಿದೆ. ಆದರೂ ಓಝೋನ್ ಪದರಕ್ಕೆ ತೂತು ಬೀಳದಂತೆ ತಡೆಯಲೇಬೇಕಿದೆ